MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:84 ENGLISH DAILY Subscription Yearly - Rs. - WEDNESDAY 10-11-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಈ ವರೆಗೆ 209 ಲಕ್ಷ ಟನ್ ಭತ್ತ ಖರೀದಿ

ಪ್ರಸ್ತುತ ಖಾರಿಫ್ ಋತುವಿನಲ್ಲಿ ಈ ತನಕ ಸರಕಾರ ತನ್ನ ಏಜೆನ್ಸಿ FCI ಮೂಲಕ 209.52 ಲಕ್ಷ ಟನ್ ಭತ್ತ ಖರೀದಿಯಾಗಿದೆಯೆಂದು ಹೇಳಿದೆ. ಇದರ ಮೌಲ್ಯ ರೂ. 41,066.80 ಕೋಟಿಗಳು. ಛತ್ತೀಸ್‌ಗಡ್, ಗುಜರಾತ್, ಹರಿಯಾಣ, ಹಿಮಾಚಲಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಉತ್ತರಪ್ರದೇಶ, ಉತ್ತರಕಾಂಡ್, ತೆಲಂಗಾಣ, ರಾಜಸ್ಥಾನ, ಕೇರಳ, ತಮಿಳುನಾಡು ಹಾಗೂ ಬಿಹಾರಗಳಲ್ಲಿ ಖರೀದಿಯಾಗಿದೆಯೆನ್ನಲಾಗಿದೆ. ಹಿಂದಿನ ಋತುಗಳಂತೆ ಈ ವರ್ಷವೂ ಖರೀದಿ ಪ್ರಗತಿಯಲ್ಲಿದೆ.

## ಬೇಳೆಕಾಳು ದರ ದುರ್ಬಲ

ಈ ಬಾರಿ ದೀಪಾವಳಿ ಹಬ್ಬಕ್ಕೆ ಬೇಳೆಕಾಳು ಬೇಡಿಕೆ ಸಾಮಾನ್ಯವಾಗಿದ್ದು, ಬೇಡಿಕೆ ಅತಿ ಹೆಚ್ಚಳವಾಗಿರಲಿಲ್ಲವೆಂದು ವ್ಯಾಪಾರಿ ವಲಯಗಳಿಂದ ಕೇಳಿಬರುತ್ತಿದ್ದು, ಹಬ್ಬದ ನಂತರ ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ, ಹಾಗೂ ಹೊಸ ಬೆಳೆಯ ಬೇಳೆಕಾಳು ಮಾರುಕಟ್ಟೆಗೆ ಪ್ರವೇಶಿಸಲಿರುವುದರಿಂದ ದರ ಸ್ವಲ್ಪ ಇಳಿಕೆ ಕಾಣುತ್ತಿದ್ದು ದರ ದುರ್ಬಲಗೊಂಡಿದೆ.